**ದಿನಾಂಕಃ 21.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಜೆ ಕೆ ರವರಿಂದಃ**

ನಾನು ಯಾವುದೇ ರೀತಿಯ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ಸಾಕ್ಷ ಪ್ರಮಾಣಪತ್ರದಲ್ಲಿರುವ ಎಲ್ಲಾ ಮಾಹಿತಿಗಳು ತಿಳಿದಿರುತ್ತವೆ. ಅದರಲ್ಲಿರುವ ಸಹಿಯೂ ಸಹ ನನ್ನದೆ. ಅದಕ್ಕೆ ಸಹಿಯನ್ನು ನನ್ನ ಕಚೇರಿಯಲ್ಲಿ ಹಾಕಿರುತ್ತೇನೆ.

ದಾವೆಯನ್ನು ಯಾವ ಕಾರಣಕ್ಕೆ ಹೂಡಿರುತ್ತೇನೆದು ತಿಳಿದಿರುತ್ತದೆ. ದಾವಾಸ್ವತ್ತು 4 ಎಕರೆ ಇರುತ್ತದೆ. ದಾವಾಸ್ವತ್ತುಗೆ ಸಂಬಂಧಿಸಿದಂತೆ ಇರುವ ಎಲ್ಲಾ ದಾಖಲೆಗಳನ್ನು ನ್ಯಾಯಾಯಕ್ಕೆ ಹಾಜರುಪಡಿಸಿರುತ್ತೇನೆ. ಪ್ರತಿವಾದಿಗೂ ಹಾಗೂ ದಾವಾಸ್ವತ್ತುಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿ.

ನನ್ನ ಸಾಕ್ಷ ಪ್ರಮಾಣಪತ್ರದಲ್ಲಿ 183 ಎಕರೆ ಹಾಗೂ 38 ಗುಂಟೆ ಸರ್ಕಾರಿ ಗೋಮಾಳ ಇರುತ್ತದೆ ಎಂದು ತಿಳಿಸಿರುತ್ತೇನೆಂದರೆ ಸರಿ. ಸರ್ಕಾರಿ ಗೋಮಾಳ ಇದೆ ಎಂದು ತೋರಿಸಲು ಯಾವುದೇ ದಾಖಲೆಗಳು ಹಾಕಿಲ್ಲ. 183 ಎಕರೆ ಹಾಗೂ 38 ಗುಂಟೆ ಈಗಲೂ ಸಹ ಸರ್ಕಾರಿ ಜಾಗವಾಗಿರುತ್ತದೆ ಎಂದರೆ ಸರಿ.

ಶ್ರೀನಿವಾಸಪ್ಪ ಬಿನ್ ಕರಿವೆಂಕಟಪ್ಪ ರವರಿಗೆ 1981-82 ರಲ್ಲಿ ದಾವಾಸ್ವತ್ತು ಮಂಜೂರಾತಿಯಾಗಿದ್ದು, ನಂತರ ಅವರ ಬಳಿಯಿಂದ ನಾನು ಖರೀದಿಸಿರುತ್ತೇನೆ. ಮಂಜೂರಾತಿ ಪತ್ರವನ್ನು ಅವರ ಬಳಿಯಿಂದ ಪಡೆದಿರುವುದಿಲ್ಲ. ಮಂಜೂರಾತಿ ಪತ್ರವನ್ನು ನೋಡಿರುವುದಿಲ್ಲ. ಸುಳ್ಳು ಮಂಜೂರಾತಿ ಪತ್ರಗಳನ್ನು ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಮಂಜೂರಾತಿಪತ್ರವು ಇಲ್ಲದೆ ಇರುವ ಕಾರಣಕ್ಕೆ ನನ್ನ ಹೆಸರಿಗೆ ಆದ ಕ್ರಯಪತ್ರವೂ ಸಹ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಮಂಜೂರಾತಿ ಆಗದೆ ಇರುವ ಕಾರಣಕ್ಕೆ ಯಾವುದೇ ಮಂಜೂರಾತಿ ಪತ್ರವು ಇರುವುದಿಲ್ಲ ಹಾಗೂ ನಾವು ಮಂಜೂರಾತಿಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಶ್ರೀನಿವಾಸಪ್ಪ ಬಿನ್ ಕರಿವೆಂಕಟಪ್ಪ ರವರ ಬಳಿ ಇರುವ ಮಂಜೂರಾತಿಪತ್ರವನ್ನು ಹಾಜರುಪಡಿಸಲು ಆಗುವುದಿಲ್ಲ, ಅದನ್ನು ನೋಡಿರುತ್ತೇನೆ. ಅವರ ಬಳಿ ಸದರಿ ದಾಖಲೆ ಇದೆಯೋ ಅಥವಾ ಇಲ್ಲಯೋ ಎಂಬುದು ಗೊತ್ತಿಲ್ಲ.

ನನ್ನ ಸಾಕ್ಷಪ್ರಮಾಣಪತ್ರದ 3 ಖಂಡಿಕೆಯ ಮೊದಲನೇಯ 5 ಲೈನುಗಳು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ದಿ.29.06.2000 ರ ಇಸವಿಯಲ್ಲಿ ಶ್ರೀನಿವಾಸಪ್ಪ ಬಿನ್ ಕರಿವೆಂಕಟಪ್ಪ ರವರ ಬಳಿಯಿಂದ ಮಾಡಿಕೊಂಡಂತಹ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅವರ ಬಳಿಯಿಂದ ನಾನು 2 ಎಕರೆ ಜಾಗವನ್ನು ಖರೀದಿಸಿರುತ್ತೇನೆ. ಖರೀದಿಸುವ ಮೊದಲು ಯಾವ ದಾಖಲೆಗಳನ್ನು ನೋಡಿರುತ್ತೇನೆ ಗೊತ್ತಿರುವುದಿಲ್ಲ.

4 ಎಕರೆಯಲ್ಲಿ ಉಳಿದ 2 ಎಕರೆ ನನ್ನ ತಂದೆಯ ಸ್ವತ್ತಾಗಿರುತ್ತದೆ, ಅದನ್ನು ಅವರು ಬೇರೆಯವರಿಂದ ಖರೀದಿ ಮಾಡಿರುತ್ತಾರೆ. ಸದರಿ ಖರೀದಿಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನ್ನ ತಂದೆಗೆ ಮಾರಾಟ ಮಾಡಿದವರಿಗೆ ಸ್ವತ್ತು ಯಾವ ರೀತಿ ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ, ಕ್ರಯವಾದಾಗ ನನಗೆ ಇನ್ನೂ ಚಿಕ್ಕವಯಸ್ಸು ಇರುತ್ತದೆ. ಸದರಿ

ಸ್ವತ್ತು ನನ್ನ ಭಾಗಕ್ಕೆ ವಿಭಾಗ ಮೂಲಕ ಬಂದಿರುತ್ತದೆ. ವಿಭಾಗವು ನ್ಯಾಯಾಲಯದಲ್ಲಿ ಆಗಿರುತ್ತದೆ.

ನಾವು ವಿಭಾಗ ಮಾಡಿಕೊಂಡಂತಹ 2 ಎಕರೆ ಜಮೀನಿಗೆ ನಮ್ಮ ಬಳಿ ಯಾವುದೇ ಮೂಲ ದಾಖಲೆಗಳು ಇರುವುದಿಲ್ಲ, ಸದರಿ ಜಾಗವು ಈಗಲೂ ಸಹ ಸರ್ಕಾರಿ ಜಮೀನಾಗಿರುತ್ತದೆ ನಮ್ಮ ಹೆಸರಿನಲ್ಲಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ.

ವಿಭಾಗದಂತೆ ಬಂದಂತಹ 2 ಎಕರೆ ಜಾಗವು ನನಗೆ ಬಂದಿರುವುದಕ್ಕೆ ನಾನು ನ್ಯಾಯಾಲಯದಲ್ಲಿ ಆದಂತಹ ವಿಭಾಗಪತ್ರ ಹಾಗೂ ನನ್ನ ತಂದೆಗೆ ಆದಂತಹ ಕ್ರಯಪತ್ರವನ್ನು ಹಾಗೂ ಖಾತಾ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ, ಸದರಿ ಸ್ವತ್ತು ಈಗ ನನ್ನ ಹೆಸರಿನಲ್ಲಿಯೆ ಇರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಖಾತಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಆದರೂ ಸಹ ಹಾಜರುಪಡಿಸಿರುತ್ತೇನೆಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮ್ಯುಟೇಷನ ಪ್ರತಿಗಳ ಬಗ್ಗೆ ಪ್ರಶ್ನಿಸಿದಾಗ ನನ್ನ ಹೆಸರಿಗೆ ಆದಂತಹ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ಮ್ಯುಟೇಷನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

2 ನೇ ವಾದಿಯು ನನ್ನ ಹೆಂಡತಿ. ಜಮೀನಿಗೆ ಸಂಬಂಧಿಸಿದಂತೆ ಆದ ಗಲಾಟೆಯಲ್ಲಿ ಅವರು ಇದ್ದರು, ಅದನ್ನು ಹೊರತುಪಡಿಸಿ ಅವರಿಗೂ ಹಾಗೂ ಈ ದಾವೆಗೂ ಯಾವುದೇ ಸಂಬಂಧವಿರುವುದಿಲ್ಲ. ನಾನು ಹೇಳಿದಂತೆ ಯಾವುದೇ ಒತ್ತುವರಿಯಾಗಲಿ ಅಥವಾ ಇನ್ನಿತರೆ ರೀತಿಯಲ್ಲಿ ತೊಂದೆರೆಯಾಗಿರುವುದಿಲ್ಲ, ಆದರೂ ಸಹ ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾಸ್ವತ್ತು ಈಗಲೂ ಸಹ ಸರ್ಕಾರಿ ಜಾಗವಾಗಿದ್ದು, ಪ್ರತಿವಾದಿಗೆ ತೂಂದರೆ ಕೊಡುವ ಉದ್ದೇಶದಿಂದ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ವಿಭಾಗದಿಂದ ಹಾಗೂ ಕ್ರಯದಿಂದ ಬಂದಂತಹ ಸ್ವತ್ತುಗಳಿಗೆ ಸರ್ವೇ ಮಾಡಿಸಿರುವುದಿಲ್ಲ, ಆದರೆ ಸ್ವಾಧೀನದಲ್ಲಿ ನಾನೇ ಇರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇರುವುದಿಲ್ಲ.

ಸ್ವತ್ತಿನ ಚೆಕ್ಕು ಬಂದಿ ನನಗೆ ತಿಳಿದಿರುತ್ತದೆ. ನನ್ನ ಮತ್ತು ಪ್ರತಿವಾದಿಯ ಜಮೀನಿನ ನಡುವೆ ಒಂದ ಹಳ್ಳವಿದ್ದು ಈಗ ಪ್ರತಿವಾದಿಯು 1 ಎಕರೆ ಜಾಗವನ್ನು ಒತ್ತುವರಿ ಮಾಡಿಸಿರುತ್ತಾರೆ. ಒತ್ತುವರಿಯಾಗಿದ್ದಕ್ಕೆ ಯಾವುದೇ ಅಳತೆಯನ್ನು ಮಾಡಿಸಿರುವುದಿಲ್ಲ. ಪ್ರತಿವಾದಿಯು ಯಾವುದೇ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ, ಅವರು ಸ್ವಾಧೀನದಲ್ಲಿರುವ ಜಮೀನು ಅವರದ್ದೇ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಒತ್ತವರಿ ಮಾಡಿದಂತಹ ಜಮೀನಿನಲ್ಲಿ ಹುಣಸೆ ಹಾಗೂ ಹೊಂಗೆ ಮರವಿದ್ದು ಅದನ್ನು ಅವರು ಕಿತ್ತು ಹಾಕಿರುತ್ತಾರೆ. ಸದರಿ ಮರಗಳು ನನಗೆ ಸೇರಿರುವುದಿಲ್ಲ ಅದು ಸರ್ಕಾರಿ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ.

ಒಟ್ಟು 4 ಎಕರೆ ಜಾಗಕ್ಕೆ ಈ ದಾವೆಯನ್ನು ಹೂಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**